# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1824 (2184)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕವಟಗಿಮಠಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಅಬಕಾರಿ ಸಚಿವರು

ವಿಷಯ : ಎಂ.ಎಸ್.ಐ.ಎಲ್. ಮದ್ಯದಂಗಡಿಗಳಿಗೆ ಪರವಾನಗಿ ದೊರೆತರೂ ಅಂಗಡಿ ತೆರೆಯಲು ಸ್ಥಳಾವಕಾಶ ಸಿಗದಿರುವ ಬಗ್ಗೆ

(ಅ) ಖಾಸಗಿ ಬಾರ್ ಮಾಲೀಕರುಗಳ ಪ್ರಭಾವದಿಂದಾಗಿ ಸರ್ಕಾರಿ ಸ್ವಾಮ್ಯದ ಎಂ.ಎಸ್.ಐ.ಎಲ್ ಮದ್ಯದಂಗಡಿಗಳಿಗೆ ಮಂಜೂರಾತಿ ದೊರೆತರೂ ಅಂಗಡಿ ತೆರೆಯಲು ಸ್ಥಳಾವಕಾಶ ಸಿಗದಿರುವ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಮಂಜೂರಾತಿ ದೊರೆತು ಅಂಗಡಿ ತೆರೆಯಲು ಸಾಧ್ಯವಾಗದಿರುವ ಪ್ರಕರಣಗಳೆಷ್ಟು ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದಲ್ಲಿ ಎಂ.ಎಸ್.ಐ.ಎಲ್ ನಿಂದ ನಡೆಸಲಾಗುವ ಮದ್ಯದಂಗಡಿಗಳ ಮಳಿಗೆಗಳೆಷ್ಟು ;

(ಈ) ಬೆಳಗಾವಿ ಜಿಲ್ಲೆಯಲ್ಲಿರುವ ಒಟ್ಟು ಎಂ.ಎಸ್.ಐ.ಎಲ್. ಮದ್ಯದಂಗಡಿ ಮಳಿಗೆಗಳೆಷ್ಟು ; ಮಂಜೂರಾತಿ ದೊರೆತು ಅಂಗಡಿ ತೆರೆಯಲು ಸಾಧ್ಯವಾಗಿಲ್ಲದ ಪ್ರಕರಣಗಳೆಷ್ಟು ?